ವಿಂಗಡಿಸುತ್ತಾ, ಅಂತಹ ಗುಂಪಿಗೆ ಹೆಸರೂ ಕೊಡುತ್ತ ಕೂತ. ಮೊಬೈಲ್ ಮುಟ್ಠಾಳರು, ಹೊಟ್ಟೆಬಾಕರು, ಗುಂಡು ಹೊಟ್ಟೆಯವರು, ಅವಸರಕ್ಕೆ ಹುಟ್ಟಿದವರು... ಈ ಅಧಿಕಪ್ರಸಂಗದಲ್ಲಿ ಇನ್ನೇನು ಕಳೆದೇ ಹೋದ ಎನ್ನುವಾಗ "ಏನು ಕೊಡಲಿ?" ಎನ್ನುವ ದನಿ ಬೆಚ್ಚಿ ಬೀಳಿಸಿತು. ತಿರುಗಿ ನೋಡಿದರೆ ಲೋಕಿ ಅವನತ್ತಲೇ ದುರುಗುಟ್ಟಿ ನೋಡುತ್ತ ಉತ್ತರಕ್ಕಾಗಿ ಕಾಯುತ್ತಿದ್ದ.

'ಏ ಲೋಕಿ, ನಿನಗೆ ನಿಜವಾಗಿಯೂ ನಾನು ಕಾಣಿಸ್ತಿದ್ದೀನಾ?' ಅಪನಂಬಿಕೆ, ಆಸೆಗಳು ಬೆರೆತ ಪ್ರಶ್ನೆಯದು. ಬಿಡುಗಡೆ ಬಯಸುವ ಆಸೆಯೊಂದು 'ಹೌದು'ಎನ್ನುವ ಉತ್ತರ ಬಯಸುತ್ತಿದ್ದರೆ, ತಲೆಚಿಟ್ಟು ಹಿಡಿಸುವ ಬದುಕಿನಲ್ಲಿ ಮುಂದಿನ ಪರಿಣಾಮ ಏನಾಗಬಹುದೆಂದು ಅರಿಯದಿದ್ದರೂ ತಗುಲಿಕೊಂಡ ವಿಶೇಷತೆಯನ್ನು ಬಿಟ್ಟುಕೊಡಬಯಸದ ಹುಡುಗುಬುದ್ಧಿ 'ಇಲ್ಲ' ಎನ್ನುವ ಉತ್ತರವನ್ನು ಬಯಸುತ್ತಿತ್ತು.

'ಓಹೋ, ಖಂಡಿತಾ, ಇದೆಂತಹ ಪ್ರಶ್ನೆ ನಿಮ್ದು' ಎಂದು ನಗುವಿನೊಂದಿಗೆ ಸಾರಿದ ಲೋಕಿ, ನಂತರ ಹೀಗೆಯೇ ಎಂದು ಹೇಳಲಾಗದ ಒಂದು ರೀತಿಯಲ್ಲಿ ದಿಟ್ಟಿಸಿ ನೋಡತೊಡಗಿದ. ಕಣ್ಣುಗಳಲ್ಲಿ ನಗುವಿನ ಬೂದಿಯ ಒಳಗಿನ ಸುಡುವ ಕೆಂಡದಂತಹ ಭಯವಿತ್ತು. ಅದರ ಬೆಳಕಿನಲ್ಲಿ ಕಣ್ಣಿನ ಕೆಳಗೆ ಅಡಗಿಕೊಂಡಿದ್ದ ಗೀರು ಅಡಿಗೆರೆಯಂತೆ ಎದ್ದು ಕಾಣತೊಡಗಿತು. ಮಹಾನ್ ಅಪಾಯದ ಮುನ್ಸೂಚನೆಯನ್ನು ಹೇಳುವವನ ಹಾಗೆ ಲೋಕಿ ತಗ್ಗಿದ ಸ್ವರದಲ್ಲಿ, ಆತ್ಮಾರಾಮನನ್ನು ಬಿಟ್ಟು ಬೇರೆಲ್ಲ ಕಡೆಯೂ ಕಣ್ಣು ಹಾಯಿಸುತ್ತ ಹೇಳಿದ:

'ಹುಚ್ಚು ಹುಡುಗ. ನಿಂಗೆ ಬುದ್ಧಿ ಸ್ಥಿಮಿತದಲ್ಲಿಲ್ಲ. ಎಲ್ಲರ ಕಣ್ಣಿಗೂ ನೀನು ಕಾಣುತ್ತಿ. ಅವರು ಗಮನಿಸುತ್ತಲೂ ಇದ್ದಾರೆ. ಸುಮ್ಮನೆ ಮಳ್ಳನ ಹಾಗೆ ಮಾಡಬೇಡ. ಸಂಜೆ ಒಂಬತ್ತು ಗಂಟೆಯ ನಂತರ ಬಾ, ನಿನಗೇನಾಗಿದೆ ಎಂದು ನಾನು ಹೇಳುತ್ತೇನೆ. ಅಲ್ಲಿಯವರೆಗೆ ಯಾವ ಮಂಗಚೇಷ್ಟೆಯನ್ನೂ ಮಾಡದೆ ಸುಮ್ಮನಿದ್ದು ಬಿಡು ಮಾರಾಯ.'

ದನಿಯಲ್ಲಿ ಬೇಡಿಕೆಯಿದ್ದರೂ, ಯಾವಾಗಲೂ ನಗುನಗುತ್ತ ಹರಟುವ ಲೋಕಿಯ ಎಚ್ಚರಿಕೆಯ ಮಂದಸ್ವರದಲ್ಲಿ ಭಯಂಕರ ತೂಫಾನಿನ ಮುನ್ಸೂಚನೆಯಿತ್ತು. ಆದರೆ ಒಂದು ಭರವಸೆಯೂ ಇತ್ತು. ಕೆಟ್ಟೆನಿಸಲಿಲ್ಲ. ಲೋಕಿ ಹಲವು ವರ್ಷಗಳ ಪರಿಚಯದ ಮನುಷ್ಯ, ಎಲ್ಲರಿಗೂ ಒಳಿತನ್ನು ಬಯಸುವವ. ಆತ್ಮಾರಾಮನಿಗೆ 'ಹಾಗಾದರೆ ವೆಂಕಟೇಶ ಶೆಟ್ಟರೇಕೆ ಅಷ್ಟೆಲ್ಲ ಮಾಡಿದರೂ ಮಾತಾಡಲಿಲ್ಲ' ಎನ್ನುವ ಪ್ರಶ್ನೆ ಹುಟ್ಟಿ, ಅವರು ಕುಳಿತಿದ್ದ ಕ್ಯಾಷಿಯರ್ ಕೌಂಟರ್ ಕಡೆ ದೃಷ್ಟಿ ಹೋಯಿತು. ಅವರು ಇವನ ಟೇಬಲ್ಲಿನ ಕಡೆಯೇ ನೋಡುತ್ತಿದ್ದರು, ನಗು ಎನ್ನಬಹುದಾದ ಮುಖಭಾವವನ್ನೂ ತೋರಿದರು. ಅದನ್ನು ನೋಡಿ, ತಾನೀಗ ಸುತ್ತಲ ಜನರ ಕಣ್ಣಿಗೂ ಬೀಳುತ್ತಿರುವುದು ಖಾತ್ರಿಯಾಗಿ ಅಲ್ಲಿಯವರೆಗೆ ಮಾಡಿದ ಕಪಿಚೇಷ್ಟೆಗಳಿಗಾಗಿ ನಾಚಿಕೆಯಾಯಿತು. ಒಮ್ಮೆ ರೂಮಿಗೆ ಓಡಿ ಕನ್ನಡಿಯ ಮುಂದೆ ನಿಂತು ಖಾತ್ರಿಪಡಿಸಿಕೊಳ್ಳುವ ಉಮೇದೂ ಬಂತು. ಈ ಹೊಯ್ದಾಟದಲ್ಲಿ ಮರೆತೇ ಹೋಗುತ್ತಿದ್ದ ವ್ಯವಹಾರವನ್ನು ನೆನಪಿಸುವವನಂತೆ ಲೋಕಿ, 'ಟೇಬಲ್ ನಂಬರ್ ನಾಲ್ಕು, ಒಂದು ಮಸಾಲೆ, ಒಂದು ಚಾ' ಎಂದು ಆತ್ಮಾರಾಮನ ಎಂದಿನ ಆರ್ಡರನ್ನು ತನ್ನ ಎಂದಿನ ಸ್ವರದಲ್ಲಿ ರಾಗವಾಗಿ ಕೂಗಿ ಮುಂದಿನ ಟೇಬಲ್ಲಿಗೆ ಧಾವಿಸಿದ. ಅಲ್ಲಿಂದ ಇನ್ನೂ ತನ್ನತ್ತ ನೋಡುತ್ತಿದ್ದ ಆತ್ಮಾರಾಮನೆಡೆಗೆ ಎರಡೂ ಕಣ್ಣುಗಳನ್ನು ಕ್ಷಣಕಾಲ ಮುಚ್ಚಿ, ತಲೆಯಲ್ಲಾಡಿಸಿ 'ತಾನಿದ್ದೇನೆ, ನಂಬು' ಎನ್ನುವ ಹಾಗೆ ಸನ್ನೆ ಮಾಡಿದಾಗ ಸ್ವಲ್ಪ ನೆಮ್ಮದಿಯಾಯಿತು.

ಲೋಕಿ ಅಲ್ಲಿಂದ ಹೋದಮೇಲೆ, ಶೆಟ್ಟರ ಕಣ್ಣಿಗೆ ಬಿದ್ದಿಲ್ಲ ಅಂದಮೇಲೆ ತಾನು ಕೂತಾಗಲಷ್ಟೇ ಕಾಣುತ್ತಿದ್ದಿರಬಹುದಲ್ಲವೇ ಎನ್ನುವ ಅನುಮಾನ ಬಂತು. ಯಾವುದಕ್ಕೂ ಈಗ ಸುಮ್ಮನಿದ್ದು ಸಂಜೆ ಒಂಬತ್ತರವರೆಗೆ ಕಾಯಬೇಕು. ನಂತರ ಲೋಕಿ ಏನು ಹೇಳುತ್ತಾನೋ ನೋಡಿದರಾಯ್ತು ಎಂದುಕೊಂಡ. ಅಲ್ಲಿಯವರೆಗೆ ಕಾಯುವುದು ಅಂದರೆ ಅಷ್ಟು ಸುಲಭವಾಗಿರಲಿಲ್ಲ. ಇನ್ನೊಂದೆಡೆ ಆಫೀಸಿಗೆ ಹೋಗಲು ತಡವಾಗುತ್ತಿತ್ತು. ಅಭ್ಯಾಸದ ಬಲದಿಂದಲೋ, ಅಥವಾ ಬೇರೇನು ಮಾಡಬೇಕೆಂದು ಉಪಾಯ ಕಾಣದೆಯೋ ಆಫೀಸಿನ ಕಡೆ ಕಾಲುಹಾಕಿದ.

* * *

ಆತ್ಮಾರಾಮ ಆಫೀಸು ತಲುಪುವಾಗ ಆಗಲೇ ಅರ್ಧ ಗಂಟೆ ತಡವಾಗಿತ್ತು; ಅವನನ್ನು ಯಾರೂ ಗಮನಿಸಲಿಲ್ಲ. ಅದೇನು ಅಂತಹ ಆಶ್ಚರ್ಯ ತರಲಿಲ್ಲ. ದಿನದ ಇಪ್ಪತ್ನಾಲ್ಕೂ ಗಂಟೆ ಕೆಲಸ ನಡೆಯುತ್ತಿದ್ದ ಆ